Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

Volume 39 | Issue - 22 | 28th November 2024

## ಕ್ಲಬ್ ಅಸೆಂಬ್ಲಿ

ವಿಷಯ :

**ಕ್ಲಬ್ಬಿಗೆ ಡಿಸ್ಟ್ರಿಕ್ಟ್ ಗವರ್ನರ್**
**ಅಧಿಕೃತ ಭೇಟಿಯ ಬಗ್ಗೆ ಪೂರ್ವ ತಯಾರಿ**

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

# ವಾರದ ಸಭೆಯ ವರದಿ




ಪಶ್ಚಿಮ ಘಟ್ಟದ ತಪ್ಪಲು, ಸುತ್ತಲು ಸುಂದರ ಪ್ರಶಾಂತವಾದ ಹಸಿರಿನ ವಾತಾವರಣ ಅದರೊಂದಿಗೆ ಜುಳು ಜುಳು ಹರಿಯುವ ನೀರಿನ ಸೆಲೆ. ಇವೆಲ್ಲ ಸೇರಿದರೆ ಸ್ವರ್ಗವೇ ಭೂಮಿಯ ಮೇಲಿದೆ ಎನ್ನುವ ಅನುಭವ. ಇಂತಹ ರಮ್ಯರಮಣೀಯ ಪ್ರದೇಶವಾದ ಹೊಸಂಗಡಿಯ ಎಡಮೊಗೆಯ "ಛಾತ್ರಾ ಎಸ್ಟೇಟ್" ನಲ್ಲಿ ಕುಟುಂಬ ಸಮ್ಮಿಲನ ಕಾರ್ಯಕ್ರಮವಾಗಿ ಮೂಡಿಬಂದಿತು ಈ ವಾರದ ಸಭೆ.

ಸುಮಾರು ಸಂಜೆ ನಾಲ್ಕು ಗಂಟೆಯ ಸಮಯಕ್ಕೆ PDG ರೊ. ಸದಾನಂದ ಛಾತ್ರಾರವರ ಮಾಲೀಕತ್ವದ ದುರ್ಗಾಂಬಾ ಬಸ್ಸಿನಲ್ಲಿ ತಲುಪಿದ ನಮ್ಮ ಕ್ಲಬ್ ಸದಸ್ಯರು ಕುಟುಂಬ ಸದಸ್ಯರೊಂದಿಗೆ ನೀರಿನಲ್ಲಿ ಸಮಯ ಕಳೆದು ಎಸ್ಟೇಟ್ ರೈಡ್ ಹೋಗುತ್ತಾ ತುಂಬಾ ಖುಷಿಪಟ್ಟರು. ಇದೊಂದು ಅದ್ಭುತವಾದ ಅನುಭವವಾಗಿತ್ತು. ಸಂಜೆಯ ಲಘು ಉಪಾಹಾರದ ನಂತರ ಹೊರಾಂಗಣದಲ್ಲಿ ಸಭೆಯು ಆರಂಭಗೊಂಡಿತು. ರೊ. ಶ್ರೀನಿವಾಸ್ ಶೇಟ್‌ರವರ ಪ್ರಾರ್ಥನೆಯ ನಂತರ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ವಾರದ ವರದಿಯನ್ನು ಸಭೆಗೆ ಮಂಡಿಸಿದರು. ರೊ. ವಾಸುದೇವ ಕಾರಂತರು ವಾರದ ಚಿಂತನೆಯಲ್ಲಿ ಜೀವನದಲ್ಲಿ ಸುಖವಾಗಿರುವ ದಾರಿಯನ್ನು ತಿಳಿಸಿದರು. ರೊ. ಕೆ. ಕೆ. ಕಾಂಚನರು ರೋಟರಿ ಮಾಹಿತಿಯನ್ನು ಸಭೆಗೆ ನೀಡಿದರು.

ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಇಂತಹ ಸುಂದರ ವಾತಾವರಣದಲ್ಲಿ ಸಭೆಯನ್ನು ನಡೆಸಲು ಅನುವು ಮಾಡಿಕೊಟ್ಟು ಆತಿಥ್ಯವಹಿಸಿದ ಜಾತ್ರಾ ಎಸ್ಟೇಟ್‌ನ ಮಾಲೀಕರಾಗಿರುವಂತಹ PDG ರೊ. ಸದಾನಂದ ಚಾತ್ರರಿಗೆ ಧನ್ಯವಾದವನ್ನು ಅರ್ಪಿಸುತ್ತಾ ಸಭೆಯಲ್ಲಿ ಗುರುತಿಸಿ ಗೌರವಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ Past AG ರೊ.ಡಾ. ಸಂದೀಪ್ ಶೆಟ್ಟಿ ಹಾಗೂ ನಮ್ಮ ಕ್ಲಬ್ಬಿಗೆ ನೂತನ ಸದಸ್ಯರಾಗಿ ಸೇರ್ಪಡೆಗೊಳ್ಳಲಿರುವ ಯೂನಿಯನ್ ಬ್ಯಾಂಕ್ ಕುಂದಾಪುರದ GM ಆಗಿರುವ ಈಶ್ವರ್ ನಾಯಕ್ ಇವರನ್ನು ಗುರುತಿಸಿ ಸ್ವಾಗತಿಸಿದರು. ರೊ. ಸತ್ಯನಾರಾಯಣ ಪುರಾಣಿಕರ ನಗೆ ಚಟಾಕಿಯ ನಂತರ ಸಭೆಯು ಪೂರ್ಣಗೊಂಡಿತು.

ಚುಟುಕಾದ ಸಭಾ ಕಾರ್ಯಕ್ರಮದ ನಂತರ ಕ್ಲಬ್ ಸದಸ್ಯರು ಹಾಗೂ ಅವರ ಕುಟುಂಬದವರಿಂದ ವಿವಿಧ ಮನೋರಂಜನ ಕಾರ್ಯಕ್ರಮವು ನಡೆಯಿತು. ರೊ. ಅನಿಲ್ ಡಿ'ಸಿಲ್ವಾರವರ ಉತ್ತಮ ಕಾರ್ಯಕ್ರಮ ನಿರೂಪಣೆ ಹಾಗೂ ನಡೆಸಿದ lucky games ಎಲ್ಲರನ್ನೂ ಖುಷಿಗೊಳಿಸಿತು. ಆ್ಯನೆಟ್ ದಿಯಾ ಡಿ'ಸಿಲ್ವಾ, ದೀಪ್ ಡಿ'ಸಿಲ್ವಾ, ಆಷಿಯಾ ಮೆಂಡೋನ್ಸಾ, ಆರ್ಶ್ ಮೆಂಡೋನ್ಸಾ, ರೀಸಾ ಲೋಬೋ, ರಿವನ್ ಲೋಬೋ ಇವರ ನೃತ್ಯ, ಅಮೋಘ್ ಪೈ, ಅಭಿನವ್ ಪೈ ನರ್ತನ ಎಲ್ಲರನ್ನೂ ರಂಜಿಸಿತು. ರೊ. ನಂದಾ ನಾಯಕ್‌ರವರ ಪೌತ್ರಿಯರಾದ ಕು. ಆರುಷಿ ಹಾಗೂ ಪುಟಾಣಿ ತ್ರಿಷಾ ತಮ್ಮ ನೃತ್ಯದ ಮೂಲಕ ಮುದ ನೀಡಿದರು. ಆರಾಧ್ಯ ಬಾಯರಿಯ ಏಕ ಪಾತ್ರ ಅಭಿನಯ, ನೃತ್ಯ, ಪರಿಸರಕ್ಕೆ ತಕ್ಕುದಾದ ಹಾಡು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಆ್ಯನ್ ಅನನ್ಯ ಪೈ ಏಕಪಾತ್ರಾಭಿನಯ, ರೊ. ಶ್ರೀನಿವಾಸ ಶೇಟ್, ರೊ. ವಿವಿಯನ್ ಕ್ರಾಸ್ತಾ, ರೊ. ಕೌಶಿಕ್ ಯಡಿಯಾಳ್‌ರವರ ಸಂಗೀತದ ನಂತರ ಎಲ್ಲರೂ ಸೇರಿ ನರ್ತಿಸುತ್ತಾ ಖುಷಿ ಪಟ್ಟರು.

ಸಂಜೆಯ ಉಪಾಹಾರ, ರಾತ್ರಿಯ ಸಹಭೋಜನ ಎಲ್ಲರನ್ನೂ ಸಂತೃಪ್ತಿಗೊಳಿಸಿತು. ರೊ.ಡಾ. ಉತ್ತಮ್ ಕುಮಾರ್ ಶೆಟ್ಟಿ ಅವರ farm fresh fish food ವಿಶೇಷ ಆಕರ್ಷಣೆಯಾಗಿತ್ತು.

ಇಂತಹ ಒಂದು ಹೊಸ ಅನುಭವಕ್ಕೆ ಕ್ಲಬ್ ಸದಸ್ಯರು ಅತಿ ಹೆಚ್ಚು ಸಂಖ್ಯೆಯಲ್ಲಿ ಸಾಕ್ಷಿಯಾಗಿದ್ದು ನಿಜವಾಗಿಯೂ ಒಂದು ಉತ್ತಮ ಸ್ಮರಣೀಯ ದಿನವಾಗುವಂತಾಯಿತು.










20–11–24 ರಂದು Oakwood Indian School ನಲ್ಲಿ ನಮ್ಮ ಕ್ಲಬ್ಬಿನ ವತಿಯಿಂದ ಕಾನೂನು ಮಾಹಿತಿ ಶಿಬಿರ ನಡೆಯಿತು. ಪೋಕ್ಸೋ ಕಾಯ್ದೆಯ ಬಗ್ಗೆ ವಕೀಲರಾದ Y. ಶರತ್ ಶೆಟ್ಟಿ ಅವರು, ರಸ್ತೆ ಸುರಕ್ಷಾ ಕಾನೂನುಗಳ ಬಗ್ಗೆ ಇನ್ಸ್‌ಪೆಕ್ಟರ್ ಸುರೇಶ್‌ರವರು ಮಾಹಿತಿಯನ್ನು ನೀಡಿದರು. ಸುಮಾರು 170 ವಿದ್ಯಾರ್ಥಿಗಳಿಗೆ ಈ ಕಾರ್ಯಾಗಾರ ನಡೆಸಲಾಯಿತು.




“ತಂಬಾಕು ಸೇವನೆಯ ಅಪಾಯ ಮತ್ತು ಪರಿಣಾಮಗಳು” ಈ ವಿಚಾರವಾಗಿ ತಾಲೂಕು ಆರೋಗ್ಯ ಇಲಾಖೆಯ ಶ್ರೀಮತಿ ಮಂಜುಳ ಶೆಟ್ಟಿಯವರು Oakwood ಶಾಲೆಯ ಮಕ್ಕಳಿಗೆ ಜಾಗೃತ ಮಾಹಿತಿ ನೀಡಿದರು.



ತಾ. 21–11–2024ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆನಗಳ್ಳಿಗೆ ನಮ್ಮ ಕ್ಲಬ್ಬಿನ ವತಿಯಿಂದ ರೊ. ನಂದ ನಾಯಕರವರು 10 ಕುರ್ಚಿಗಳನ್ನು ನೀಡಿದರು. ಅಧ್ಯಕ್ಷೆ ರೊ. ಜ್ಯುಡಿತ್ ಮೆಂಡೋನ್ಸಾ ಈ ಸಂದರ್ಭದಲ್ಲಿ ಹಾಜರಿದ್ದರು.




ನವೆಂಬರ್23/24 ರಂದು ಬ್ರಹ್ಮಾವರದಲ್ಲಿ ನಡೆದ TRF ಸೆಮಿನಾರ್ 'ನವನಿಧಿ2024'ರಲ್ಲಿ ನಮ್ಮ ಕ್ಲಬ್‌ನ 17 ಸದಸ್ಯರು ನೊಂದಾಯಿಸಿ ಭಾಗವಹಿಸಿದ್ದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತರದ ನಮ್ಮ ಕ್ಲಬ್‌ನವರಾದ PDG ರೊ. ಅಭಿನಂದನ್ ಶೆಟ್ಟಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

